ಶ್ರೀ ಎಫ್. ಎಸ್. ತಾವರೆ.—ನೆಮ್ಮ ಶಿಗ್ಗಾವಿ ತಾಲ್ಲೂಕಿನಲ್ಲಿ ಈಗ ಸುಮಾರು ೧೦ ವರ್ಷಗಳಿಂದಲೂ ಕುಡಿಯಂವ ನೀರಿನ ಅನುಕೂಲತೆ ಮಾಡಿಕೊಟ್ಟಿಲ್ಲ. ಇನ್ನು ಮುಂದಾದರೂ ಆ ತಾಲ್ಲೂಕಿನಲ್ಲಿ ಕುಡಿಯಂವ ನೀರಿನ ಅನುಕೂಲತೆಯನ್ನು ಮಾಡಿಕೊಡುತ್ತಿರಾ ?

ಶ್ರೀ ಎಚ್. ಸಿದ್ಧವೀರಪ್ಪ.—ಪ್ರತಿಯೊಂದು ಹಳ್ಳಿಗೂ ಕುಡಿಯಂವ ನೀರನ್ನು ಕೊಡಬೇಕೂ ಎನ್ನುವುದು ಸರ್ಕಾರದ ನೀತಿ ಇದೆ. ಆ ರೀತಿ ಡೆವಲಪ್‌ಮೆಂಟಲ್ ವರ್ಕ್ಸ್‌ನಲ್ಲಿ ಕೆಲಸ ನಡೆಯುತ್ತಿದೆ. ಆ ತಾಲ್ಲೂಕಿಗೆ ಕುಡಿಯಂವ ನೀರಿನ ಬಾವಿ ಇಲ್ಲದೇ ಇರುವ ಗ್ರಾಮಂಗಳಿಗೆ ಬಾವಿಗಳನ್ನು ಒದಗಿಸಬೇಕೆಂದು ಡೆವಲಪ್‌ಮೆಂಟ್ ಇಲಾಖೆಗೆ ನಾನು ತಿಳಿಸುತ್ತೇನೆ.

TRANSFER OF DOCTOR ATTACHED TO P. H. DISPENSARY, MULBAGAL

382 SRI P. MUNIYAPPA (Mulbagal).—

Will the Minister for Health be pleased to state :—

(*a*) whether it has come to the notice of Government that a doctor attached to the Primary Health Dispensary in Mulbagal Taluk is continued for more than 15 years in that Taluk in different dispensaries ;

(*b*) if so, the special reasons for not transferring him according to general standing orders ?

SRI H. SIDDAVEERPPA MINISTER FOR HEALTH.—

(*a*) No.

(*b*) Does not arise.

ಶ್ರೀ ಪಿ. ಮುನಿಯಪ್ಪ : ಮುಳಬಾಗಲ್ ತಾಲ್ಲೂಕಿನಲ್ಲಿ ಡಾಕ್ಟರ್ ಚಿಕ್ಕದೇವಣ್ಣ ಎಂಬುವವರು ಕಳೆದ 20 ವರ್ಷಗಳಿಂದ ಇರುವುದರಿಂದ ಅವರನ್ನು ವರ್ಗ ಮಾಡಬೇಕೆಂದು ತಮಗೂ ಸಹ ಹೇಳಿದ್ದೆ. ಆದರೂ ಸಹ ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ ; ತಾವು ಆ ಬಗ್ಗೆ ನನಗೆ ಹೇಳಿದಾಗ, ವರ್ಗ ಮಾಡುವ ವಿಷಯ ನಿಯಮಿತ ಕಾಲದಲ್ಲಿ ಇರಲಿಲ್ಲ. ಮತ್ತು ಅವರು ಆ ಔಷಧಾಲಯದಲ್ಲಿ ಕೆಲಸ ಮಾಡಿ ಎರಡು ವರ್ಷಗಳು ಸಹ ಆಗಿರಲಿಲ್ಲ. ಮುಂದಿನ ಏಪ್ರಿಲ್ ತಿಂಗಳಲ್ಲಿ ಅವರನ್ನು ಆ ಸ್ಥಳದಿಂದ ಸ್ಥಳಾಂತರ ಮಾಡೋಣ.

ALLOTMENT OF SITES IN ARSIKERE TOWN

391 SRI H. S. SIDDAPPA (Arsikere).—

Will the Minister for Municipal Administration be pleased to state :—

(*a*) the number of persons in Arsikere Town who are houseless and siteless :

(*b*) whether the Town Municipal Council, Arsikere has distributed any sites to the houseless and siteless persons since June, 1972 ;

(*c*) whether there is any proposal before the Town Municipal Council to provide sites to the poor class who do not owa either houses or sites ?

SRI B. BASAVALINGAPPA MINISTER FOR MUNICIPAL ADMINISTRATION :—

(*a*) 1. Houseless-567,

2. Siteless-1,802.

(*b*) No.

(*c*) Yes.

ಶ್ರೀ ಎಚ್. ಎಸ್. ಸಿದ್ದಪ್ಪ.—ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಮನೆಗಳಿಲ್ಲದವರು ೫೬೭ ಮತ್ತು ನಿವೇಶನವಿಲ್ಲದವರು ೧, ೮೦೨ ಎಂದು ಹೇಳಿದ್ದೀರಿ. ಇದರಲ್ಲಿ ಬಾಡಿಗೆ ಮನೆಯಲ್ಲಿರುವವರು ಸಹ ಸೇರಿದ್ದಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಸೇರಿಲ್ಲ.

ಶ್ರೀ ಎಚ್. ಎಸ್. ಸಿದ್ದಪ.—ನನ್ನ ಎರಡನೆಯ ಪ್ರಶ್ನೆಗೆ ಉತ್ತರವಾಗಿ ಇಲ್ಲ, ಎಂದು ಹೇಳಿದ್ದೀರಿ. ಜೂನ್ ತಿಂಗಳಿನಿಂದೀಚೆಗೆ ಏನಾದರೂ ಸೈಟ್‌ಗಳನ್ನು ಹಂಚಲಾಗಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ವರದಿ ಬಂದಿಲ್ಲ.

ಶ್ರೀಎಸ್. ಬಂಗಾರಪ್ಪ.—(ಇ)ಪ್ರಶ್ನೆಗೆ ಉತ್ತರವಾಗಿ ಇದೆ, ಎಂದು ಹೇಳಿದ್ದೀರಿ. ಆ ಸಲಹೆ ಏನು ಮತ್ತು ಅದು ಯಾವ ರೀತಿಯ ಕಾರ್ಯಕ್ರಮ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.— ಈ ವಿಚಾರದಲ್ಲಿ ಹೇಳುವುದಾದರೆ, ಯಾರು ಯಾರಿಗೆ ಮನೆಗಳ ನಿವೇಶನಗಳು ಇಲ್ಲವೋ ಅವರೆಲ್ಲರಿಗೂ ನಿವೇಶನ ಒದಗಿಸಬೇಕೆಂದು ಎಲ್ಲ ಟೌನ್ ಮುನಿಸಿಪಾಲಿಟಿಗಳಿಗೂ ತಿಳಿಸಲಾಗಿದೆ. ೨-೩ ತಿಂಗಳ ಹಿಂದೆ ಈ ಬಗ್ಗೆ ಒಂದು ಯೋಜನೆಯನ್ನು ತಯಾರುಮಾಡಿ, ಪ್ರತಿಯೊಂದು ಮುನಿಸಿಪಾಲಿಟಿಯವರು ತಮ್ಮ ಊರನ್ನು ಬಡಾವಣೆ ಮಾಡುವುದರ ಮೂಲಕ ಸೈಟ್ ಇಲ್ಲದವರಿಗೆ ಸೈಟ್ ಹಂಚುವ ವ್ಯವಸ್ಥೆ ಮಾಡಬೇಕೆಂದು ತಿಳಿಸಿದ್ದೇವೆ. ಇದಕ್ಕಾಗಿ ಸೀಡ್ ಕ್ಯಾಪಿಟಲ್ ಅಂದರೆ ಬೀಜ ಬಂಡವಾಳವನ್ನು ಸಹ ಕೊಟ್ಟಿದೇವೆ. ಆದರೆ ಈ ಹಣವನ್ನು ಮುನಿಸಿಪಾಲಿಟಿಯವರು ಸರಿಯಾಗಿ ಉಪಯೋಗ ಮಾಡುತ್ತಿಲ್ಲ. ನಾವು ಕೊಡುವ ಹಣವನ್ನು ರಿವಾಲ್ವಿಂಗ್ ಫಂಡ್ ಆಗಿ ಇಟ್ಟುಕೊಂಡು ಸೈಟ್ ಇಲ್ಲದವರಿಗೆ ಸೈಟ್ ಕೊಡಬೇಕೆಂದು ಮತ್ತೆ ಎಲ್ಲ ಮುನಿಸಿಪಾಲಿಟಿಗಳಿಗೂ ಹುಕುಂ ಮಾಡಲಾಗಿದೆ. ಆದರೆ ಬಹಳ ಮುನಿಸಿಪಾಲಿಟಿಗಳು ಈ ಬಗ್ಗೆ ಆಸಕ್ತಿವಹಿಸಿ ಕೆಲಸ ಮಾಡುತ್ತಿಲ್ಲ. ಸರ್ಕಾರದ ಆದೇಶವನ್ನು ಪಾಲನೆ ಮಾಡದಿರುವ ಮುನಿಸಿಪಾಲಿಟಿಗಳನ್ನು ಸೂಪರ್‌ಸೀಡ್ ಮಾಡಿಯಾದರೂ ಸಹ ಸರ್ಕಾರದವರೇ ಆ ಕೆಲಸವನ್ನು ಮಾಡಬೇಕೆನ್ನುವ ಮಟಕ್ಕೆ ಹೋಗುತ್ತಿದ್ದೇವೆ. ಈ ಬಗೆ ಎಲ್ಲ ಮುನಿಸಿಪಾಲಿಟಿಗಳಿಗೂ ಪುನಃ ಆದೇಶ ಕೊಡುತ್ತೇವೆ. ನಿವೇಶನ ಇಲ್ಲದವರಿಗೆಲ್ಲಾ ನಿವೇಶನ ಕೊಡಬೇಕೆಂದು, ಅದಕ್ಕೆ ಪ್ರಯತ್ನ ಮಾಡಬೇಕೆಂದು ಪುನಃ ಸರ್ಕಾರದ ಆದೇಶವನ್ನು ಅವರಿಗೆ ಕಳುಹಿಸಿಕೊಡುತ್ತೇವೆ.

ಶ್ರೀ ಗೋಪಿನಾಥ್ ಆರ್. ಸಾಂದ್ರ.—ಈ ಒಂದು ಸರ್ಕಾರದ ಆದೇಶ ಹುಬ್ಬಳ್ಳಿ—ಧಾರವಾಡ ಕಾರ್ಪೊರೇಷನ್‌ಗೂ ಸಹ ಅನ್ವಯವಾಗುವುದೇ ?

ಶ್ರೀ ಬಿ ಬಸವಲಿಂಗಪ್ಪ.—ಎಲ್ಲ ಮುನಿಸಿಪಾಲಿಟಿಗಳಿಗೂ ಅನ್ವಯವಾಗುತ್ತದೆ.

ಶ್ರೀ ಕೆ. ಎಂ. ನಾಗಣ್ಣ.—ಇಲ್ಲಿ ಮನೆಗಳು ಇಲ್ಲದವರು ೫೬೭ ಮತ್ತು ನಿವೇಶನ ಇಲ್ಲದವರು ೧, ೮೦೨ ಎಂದು ಹೇಳಿದ್ದೀರಿ. ಅದರ ಅರ್ಥವೇನು ಎಂಬುದನ್ನು ವಿವರಿಸಬೇಕಂ ?

ಶ್ರೀ ಬಿ. ಬಸವಲಿಂಗಪ್ಪ.—ಮನೆಗಳು ಇಲ್ಲದವರು ಎಂದರೆ, ಜಮೀನು ಇರುತ್ತದೆ, ಮನೆಗಳು ಇರುವುದಿಲ್ಲ. ನಿವೇಶನವಿಲ್ಲದವರು ಎಂದರೆ ನಿರ್ಗತಿಕರು ಎಂದು ಹೇಳಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಅರಸೀಕೆರೆಯ ಮುನಿಸಿಪಾಲಿಟಿಯವರಿಗೆ ಈ ಬಗ್ಗೆ ಆದೇಶವನ್ನು ಹಿಂದೆ ಕೊಡಲಾಗಿದೆ ಎಂದು ಹೇಳಿದ್ದೀರಿ. ಕಳೆದ ತಿಂಗಳು ತಾವು ಅರಸೀಕೆರೆ ಪುರಸಭೆಯ ಒಂದು ಕಾರ್ಯಕ್ರಮಕ್ಕೆ ಹೋದಾಗ, ಸೈಟ್ ಇಲ್ಲದವರಿಗೆ ಸೈಟ್ ಹಂಚಲು ಹೋಗುತ್ತಿದ್ದಾರೆಂದು ತಮ್ಮ ಟೂರ್ ಪ್ರೋಗ್ರಾಮ್‌ನಲ್ಲಿ ಹೇಳಲಾಗಿತ್ತು. ಆದರಂತೆ ತಾವು ಆ ದಿನ ಸೈಟ್‌ಗಳನ್ನು ಹಂಚಿಕೆ ಮಾಡಿದಿರಾ? ಪುರಸಭೆಯವರು ಆ ದಿನ ತಮ್ಮ ಆದೇಶವನ್ನು ಕಡೆಗಣಿಸಿ ಆ ದಿನ ಸೈಟ್‌ಗಳನ್ನು ಹಂಚುವ ವ್ಯವಸ್ಥೆ ಮಾಡಿಲ್ಲಿಲ್ಲ ಎಂದು ನಾನು ಹೇಳುತ್ತೇನೆ. ಅದಕ್ಕೆ ತಮ್ಮ ಅಭಿಪ್ರಾಯವೇನು?

ಶ್ರೀ ಬಿ. ಬಸವಲಿಂಗಪ್ಪ.—ಆ ದಿವಸ ಆ ಒಂದು ಕಾರ್ಯಕ್ರಮವಿರಲಿಲ್ಲ, ಆದರೆ ಹಾಸನ ಮತ್ತು ಅರಸೀಕೆರೆ ರೋಡ್‌ನ ಮಧ್ಯದಲ್ಲಿ ೨೫೫ ಸೈಟ್‌ಗಳನ್ನು ಮಾಡಿದ್ದರು. ಆದರೆ ಅವುಗಳ ವಿಸ್ತೀರ್ಣ ಸರಿಯಾಗಿರಲಿಲ್ಲ. ಹತ್ತು—ಹದಿನೈದು, ಇಪ್ಪತ್ತು ಹದಿನೈದರ ಅಳತೆಯ ಸೈಟ್ ಗಳಾಗಿದ್ದವು. ಆದಕಾರಣ ಅದರ ವಿಸ್ತೀರ್ಣವನ್ನು ಜಾಸ್ತಿ ಮಾಡಿ ಸೈಟ್‌ಗಳನ್ನು ಬಡವರಿಗೆ ಕೊಡಿ ಎಂದು ಆದೇಶ ಕೊಟ್ಟು ಬಂದಿದ್ದೇನೆ.

ಶ್ರೀ ಎಚ್, ಎಸ್ ಸಿದ್ದಪ್ಪ.—ಸೈಟ್ ಪಡೆದುಕೊಂಡವರನ್ನು ಆ ಜಾಗದಿಂದ ಒಡಿಸಂತ್ತಿದ್ದಾರೆ ?

ಶ್ರೀ ಬಿ. ಬಸವಲಿಂಗಪ್ಪ.—ಆ ರೀತಿ ಒಡಿಸುವುದಕ್ಕಾಗುವುದಿಲ್ಲ.

CIVIL COURT AT DAVANGERE

431. SMT. C. NAGAMMA KESHAVAMURTHY (Davangere:)

Will the Minister for Law and Parliamentary Affairs be pleased to state:—

whether the Government has taken a decision for establishing Civil Court at Davangere ?

SRI D. K. NAIKAR.—(Minister for Law and Parliamentary Affairs:) No.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಚಿತ್ರದುರ್ಗ ಸಿವಿಲ್ ಕೋರ್ಟ್ ಮುಂದೆ ಇರುವ ಕೇಸ್‌ಗಳಸಂಖ್ಯೆ ಎಷ್ಟು? ಹರಿಪರ ಮತ್ತು ದಾವಣಗೆರೆ ಈ ಎರಡು ತಾಲ್ಲೂಕ್‌ಗಳಿಗೆ ಸಂಬಂಧಪಟ್ಟಂತೆ ಇರುವ ಕೇಸ್‌ಗಳ ಸಂಖ್ಯೆ ಎಷ್ಟು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಡಿ. ಕೆ ನಾಯ್ಕರ್. ಈ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀಮತಿ ಸಿ.ನಾಗಮ್ಮ ಕೇಶವಮೂರ್ತಿ.—ಈ ಬೇತಿಕೆ ಹೊಸದೇನೂ ಅಲ್ಲ. ಕೆಲವಾರು ವರ್ಷಗಳಿಂದ ಇದರ ಬಗೆ ರೆಪ್ರಸೆಂಟೇಷನ್ ಕೊಡಲಾಗುತ್ತಿದೆ. ತಮಗೂ ಸಹ ಒಂದು ಅಪ್ಲಿಕೇಷನ್ ಬಂದಿರಬಹುದು. ಈ ಬೇತಿಕೆಯ ಬಗ್ಗೆ ಸರ್ಕಾರದವರು ಶೀಘ್ರದಲ್ಲಿ ಒಂದು ತೀರ್ಮಾನಕ್ಕೆ ಬಂದು ಅಲ್ಲಿಗೆ ಸಿವಿಲ್‌ಕೋರ್ಟ್ ಕೊಡುತ್ತಾರೋ ಹೇಗೆ ಎಂಬುದನ್ನು ಹೇಳಬೇಕು?

ಶ್ರೀ ಡಿ. ಕೆ. ನಾಯಕರ್.—೧೯೭೧ನೇ ಇಸವಿಯಲ್ಲಿ ರಾಜ್ಯಪಾಲರು ಆ ಸ್ಥಳಕ್ಕೆ ಭೇಟಿಕೊಟ್ಟಾಗ ಅಲ್ಲಿಯ ಬಾರ್ ಅಸೋಸಿಯೇಷನ್ ಅವರು ಮತ್ತು ಅಲ್ಲಿಯ ಪ್ರತಿಷ್ಠಿತ ಜನರು ಅವರಿಗೆ ಈ ಬಗ್ಗೆ ಒಂದು ರೆಪ್ರಸೆಂಟೇಷನ್ ಕೊಟ್ಟರು. ಅದನ್ನು ಹೈಕೋರ್ಟಿಗೆ ಅವರ ಶಿಫಾರಸ್ ಕೇಳುವುದಕ್ಕೆ ಕಳುಹಿಸಲಾಯಿತು. ೧೯೭೧ನೇ ಸಾಲಿನಲ್ಲಿಯ ಅಂಕಿಅಂಶಗಳ ಪ್ರಕಾರ ಚಿತ್ರದುರ್ಗ ಜಿಲ್ಲೆಯಲ್ಲಿ ಒಂದಕ್ಕಿಂತ ಹೆಚ್ಚು ಸಿವಿಲ್ ಕೋರ್ಟ್‌ಗಳು ಇರಬಾರದೆಂದು ಹೈಕೋರ್ಟಿನವರು ಆಗ ತೀರ್ಮಾನಕ್ಕೆ ಬಂದಿದ್ದಾರೆ. ಅದರಂತೆ ರೆಪ್ರಸೆಂಟೇಷನ್ ಮಾಡಿದವರಿಗೆ ಉತ್ತರವನ್ನು ಸಹಕೊಡಲಾಗಿದೆ. ಪುನಃ ೧೯೭೨ನೇ ಸಾಲಿನಲ್ಲಿ ಮುಖ್ಯ